ಶಿವಮೊಗ್ಗದ ತುಂಗಭದ್ರಾ ಸಕ್ಕರೆ ಕಾರ್ಖಾನೆಗೆ ಸರ್ಕಾರ ಕೊಟ್ಟ ಗುತ್ತಿಗೆ ಜಮೀನನ್ನು ಬಿಡಿಸುವ ಬಗ್ಗೆ

೧೧೨೦. ಶ್ರೀ ಡಿ. ಜಿ. ಬಸಣ್ಣಗೌಡ (ಹೊನ್ನಾಳಿ).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿವಮೊಗ್ಗದಲ್ಲಿರುವ ತುಂಗಭದ್ರಾ ಸಕ್ಕರೆ ಕಾರ್ಖಾನೆಗೆ ಈ ಹಿಂದೆ ಸರ್ಕಾರ ಗುತ್ತಿಗೆ ಆಧಾರದ ಮೇಲೆ ಕೊಟ್ಟ ಜಮೀನಿನ ವಿಸ್ತೀರ್ಣವೆಷ್ಟು ?

ಆ) ಗುತ್ತಿಗೆ ಅವಧಿ ಮುಗಿದರೂ ಯಾವ ಕ್ರಮವನ್ನೂ ಕೈಗೊಳ್ಳದಿರುವ ಕಾರಣವಾದರೂ ಏನು ?

ಇ) ಸದರೀ ಜಮೀನನ್ನು ಕೃಷಿ ವಿಶ್ವವಿದ್ಯಾನಿಲಯಕ್ಕೆ ಬಿಟ್ಟುಕೊಡಲು ಕೋರಿಕೆಯೇನಾದರೂ ಬಂದಿದೆಯೆ ?

ಈ) ಹಾಗಿದ್ದಲ್ಲಿ ಕೂಡಲೇ ಕೃಷಿ ವಿಶ್ವವಿದ್ಯಾನಿಲಯಕ್ಕೆ ಆ ಜಮೀನನ್ನು ವರ್ಗಾಯಿಸಲು ಕ್ರಮ ಕೈಗೊಳ್ಳಲಾಗುವುದೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ೫೦೭೦ ಎಕರೆ.

ಆ) ಚಿಕ್ಕಮಂಗಳೂರು ಮತ್ತು ಶಿವಮೊಗ್ಗ ಜಿಲ್ಲಾಧಿಕಾರಿಗಳಿಗೆ ಜಮೀನುಗಳನ್ನು ತಕ್ಷಣವೇ ಸರ್ಕಾರದ ವಶಕ್ಕೆ ಪಡೆಯುವಂತೆ ಸೂಚನೆ ನೀಡಲಾಗಿದೆ.

ಇ) ಹೌದು.

ಈ) ಪರಿಶೀಲನೆ ಮಾಡಿ ನಿಯಮಾವಳಿಗಳ ಪ್ರಕಾರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಬೆಟಗುಪ್ಪ ಪಟ್ಟಣವನ್ನು ಹೊಸ ತಾಲ್ಲೂಕಾಗಿ ರಚನೆ ಮಾಡುವ ಬಗ್ಗೆ

೧೧೯೮. ಶ್ರೀ ಬಸವರಾಜ್ ಕ್ಷಿಪಾಟೀಲ್ ಅಟ್ಟೂರು (ಬಸವಕಲ್ಯಾಣ).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೀದರ್ ಜಿಲ್ಲೆಯಲ್ಲಿ ಎಷ್ಟು ತಾಲ್ಲೂಕುಗಳಿವೆ ಹಾಗೂ ಎಷ್ಟು ಕಂದಾಯ ಉಪ-ವಿಭಾಗಗಳಿವೆ ?

ಆ) ಬೆಟ್ಟಗುಪ್ಪ ಪಟ್ಟಣವನ್ನು ಹೊಸ ತಾಲ್ಲೂಕ್ಕಾಗಿ ರಚನೆ ಮಾಡಲು ಸರ್ಕಾರದವರು ಯೋಚನೆ ಮಾಡಿದ್ದಾರೆಯೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ಬೀದರ್ ಜಿಲ್ಲೆಯಲ್ಲಿ ಐದು ತಾಲ್ಲೂಕುಗಳು ಹಾಗೂ ಎರಡು ಕಂದಾಯ ಉಪ-ವಿಭಾಗಗಳಿವೆ.

ಆ) ೭೮ ಹಳ್ಳಿಗಳನ್ನು ಒಳಗೊಂಡ ಬೆಟ್ಟಗುಪ್ಪ ತಾಲ್ಲೂಕು ರಚನೆ ಪರಿಶೀಲನೆಯಲ್ಲಿದೆ.

ಕಂದಾಯ ಇಲಾಖೆಯಲ್ಲಿ ನಿವೃತ್ತಿ ವೇತನದ ಅಂತರವಿದ ಪ್ರಕರಣಗಳ ಬಗ್ಗೆ

೧೧೨೩. ಜ್ಞಾನದೇವ ದೊಡ್ಡಮೇಟಿ (ರೋಣ).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಕಂದಾಯ ಇಲಾಖೆಯೊಳಗೆ ನಿವೃತ್ತಿ ವೇತನ ಪಡೆಯುವ ನೌಕರರ ಅಂತರದ ಪ್ರಕರಣಗಳೆಷ್ಟು ?

ಆ) ಇದರಲ್ಲಿ ಧಾರವಾಡ ಜಿಲ್ಲೆಯಲ್ಲಿಯೇ ಇರುವ ''ನಿವೃತ್ತಿ ವೇತನದ ಅಂತರದ ತೀರ್ಮಾನವಾಗದ'' ಪ್ರಕರಣಗಳು ಎಷ್ಟು ಹಾಗೂ ಹೆಸರುಗಳ ವಿವರ ಒದಗಿಸುವುದು ?

ಇ) ಎಷ್ಟು ವರ್ಷಗಳಿಂದ ಈ ಪ್ರಕರಣಗಳು ತೀರ್ಮಾನವಾಗದೆ ನೆನೆಗುದಿಗೆ ಬಿದ್ದಿವೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಆ) ಕಂದಾಯ ಇಲಾಖೆಯ ಸಚಿವಾಲಯದಿಂದ ಅಧೀನಕ್ಕೊಳಪಡುವ ವಿವಿಧ ಇಲಾಖೆಗಳಲ್ಲಿ ಒಟ್ಟು ೨೨ ಪ್ರಕರಣಗಳಿವೆ. ಅವುಗಳ ಇಲಾಖಾವಾರು ವಿವರ ಈ ರೀತಿ ಇದೆ.

೧	ಕಂದಾಯ ಇಲಾಖೆ	...	೧೯
೨	ನೋಂದಣಿ ಮತ್ತು ಮುದ್ರಾಂಕ	...	೧
೩	ಮುಜರಾಯಿ	...	೧
೪	ಮಾಪನ ಮತ್ತು ಭೂ ದಾಖಲೆಗಳ ಇಲಾಖೆ	...	೧
		ಒಟ್ಟು	೨೨

ಆ) ಒಂದು (೧)–ಶ್ರೀ ಎಸ್. ಎನ್. ಸೀತಾರಾಮಂ, ಭೂದಾಖಲೆಗಳ ಸಹಾಯಕ ನಿರ್ದೇಶಕರು, ಸವಣೂರು.

ಇವರು ದಿನಾಂಕ ೨೩-೨-೧೯೫೩ ರಲ್ಲಿ ನಿವೃತ್ತಿಹೊಂದಿದ್ದು, ಸೇವಾ ಪುಸ್ತಕದಲ್ಲಿ ಹುಟ್ಟಿದ ದಿನಾಂಕವನ್ನು ತಿದ್ದಿದ್ದರಿಂದ ಇವರ ಪೋಲೆ ಶಿಸ್ತಿನ ಕ್ರಮ ಜರುಗಿಸಲಾಗಿತ್ತು. ಆದ್ದರಿಂದ, ತಾತ್ಕಾಲಿಕ ಪಿಂಚಣಿಯನ್ನು ಮಂಜೂರು ಮಾಡಿದೆ.

ಇ) ಧಾರವಾಡ ಜಿಲ್ಲೆಗೆ ಸಂಬಂಧಿಸಿದಂತೆ ೨೩-೩-೧೯೫೩ ರಿಂದ ಈ ಬಗ್ಗೆ ಶಿಸ್ತಿನ ಕ್ರಮ ಮುಕ್ತಾಯವಾಗಿದೆ. ತಕ್ಷಣ ಪಿಂಚಣಿ ಕಡತ ತಯಾರಿಸಿ ಮಹಾಲೇಖಪಾಲಕರು, ಬೆಂಗಳೂರು ಅವರಿಗೆ ಕಳುಹಿಸಿಕೊಡುವಂತೆ, ಧಾರವಾಡ ಭೂ ದಾಖಲೆಗಳ ಉಪ ನಿರ್ದೇಶಕರಿಗೆ ಈಗಾಗಲೇ ಆದೇಶ ಮಾಡಲಾಗಿದೆ.

ಸರ್ಕಾರಿ ಕೆರೆ ಕಟ್ಟೆಗಳ ಅತಿಕ್ರಮಣ ಸಾಗುವಳಿ ಕುರಿತು

೧೦೪೪. ಶ್ರೀ ಸಿ. ಎಂ. ಉದಾಸಿ (ಹಾನಗಲ್).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಆ) ಸರಕಾರಿ ಕೆರೆ ಕಟ್ಟೆಗಳನ್ನು ಅತಿಕ್ರಮಣವಾಗಿ ಸಾಗುವಳಿ ಮಾಡಿದ್ದರೆ, ಅದಕ್ಕೆ ಭೂನ್ಯಾಯ ಮಂಡಳಿಯಿಂದ ಅಧಿಭೋಗದಾರರೆಂದು ಪರಿಗಣಿಸಿ ಅವರಿಗೆ ಭೂ ಮಾಲೀಕತ್ವ ಕೊಡಬಹುದೆ ?

ಆ) ಹಾನಗಲ್ ತಾಲ್ಲೂಕು ದೊಳ್ಳೇಶ್ವರ ಗ್ರಾಮದ ರಿ.ಸ.ನಂ. ೭೮ ರಲ್ಲಿ ಸರಕಾರಿ ಕಟ್ಟೆಯನ್ನು (ಧರ್ಮ ಕಾಲುವೆ ಕೆಳಗೆ ಇರುವ) ಭೂ ನ್ಯಾಯ ಮಂಡಳಿ ತೀರ್ಮಾನದಿಂದ ಅಧಿಭೋಗದಾರನೆಂದು ತೀರ್ಮಾನಿಸಿರುವುದು ಸರಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಸಚಿವರು).—

ಆ) ಇಲ್ಲ.

ಆ) ಹೌದು.